ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 08/07/2019

ವಿಧೇಯಕ ಮಂಡನೆ ಮುಂದೂಡಲು ಸರಕಾರ ನಿರ್ಧಾರ | ಆಕ್ಷೇಪಣೆಗಳ ಪರಿಶೀಲನೆ ಬಳಿಕ ತೀರ್ಮಾನ

# ಎನ್ನಾರೈಗಳಿಗೆ ಪ್ರಾಕ್ಸಿ ಮತದಾನ ಹಕ್ಕು ಸದ್ಯಕ್ಕಿಲ್ಲ

**ಹೊಸದಿಲ್ಲಿ:** ವಿದೇಶಗಳಲ್ಲಿ ನೆಲೆಸಿರುವ ಭಾರತೀಯರು ತಾಯ್ನಾಡಿನಲ್ಲಿ ನಡೆಯುವ ವಿವಿಧ ಚುನಾವಣೆಗಳಲ್ಲಿ ಮತದಾನ ಮಾಡಲು ಮತ್ತಷ್ಟು ದಿನ ಕಾಯುವುದು ಅನಿವಾರ್ಯವಾಗಿದೆ.

'ಪ್ರಾಕ್ಸಿ' ಮತದಾನದ ಮೂಲಕ ಅನಿವಾಸಿ ಭಾರತೀಯರಿಗೆ ಮತದಾನಕ್ಕೆ ಅವಕಾಶ ಕಲ್ಪಿಸುವ ವಿಧೇಯಕವನ್ನು ಸಂಸತ್ತಿನಲ್ಲಿ ಸದ್ಯಕ್ಕೆ ಮಂಡಿಸದಿರಲು ಕೇಂದ್ರ ಸರಕಾರ ತೀರ್ಮಾನಿಸಿದೆ. ಮತದಾನಕ್ಕೆ ಅವಕಾಶ ನೀಡುವುದರಿಂದ ಆಗಬಹುದಾದ ಪರಿಣಾಮಗಳ ಬಗ್ಗೆ ಕೇಳಿಬಂದಿರುವ ವಿವಿಧ ಅಭಿಪ್ರಾಯಗಳನ್ನು ಪರಿಶೀಲಿಸಿದ ಬಳಿಕ ಅಂತಿಮ ತೀರ್ಮಾನ ಕೈಗೊಳ್ಳಲಿದೆ.

''ಜೂನ್ 24ರಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ಕಾನೂನು ಸಚಿವಾಲಯ ಸಿದ್ಧಪಡಿಸಿರುವ ವಿಧೇಯಕದ ಬಗ್ಗೆ ಚರ್ಚೆಯಾಯಿತು. ಆದರೆ, 'ಮತ್ತಷ್ಟು ಅಧ್ಯಯನ'ದ ನೆಪವೊಡ್ಡಿ ಪ್ರಸ್ತಾವನೆಯನ್ನು ಮುಂದೂಡಲಾಯಿತು. ವಿವಿಧ ಅಭಿಪ್ರಾಯಗಳ ಸಮನ್ವಯದ ನಂತರ ವಿಧೇಯಕವನ್ನು ಸಂಸತ್ತಿನಲ್ಲಿ ಮಂಡಿಸಲಾಗುವುದು,'' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಇದಕ್ಕೂ ಮುನ್ನ 16ನೇ ಲೋಕಸಭೆಯ ಅವಧಿಯಲ್ಲಿ ಇಂಥಹ ವಿಧೇಯಕವನ್ನು ಲೋಕಸಭೆಯಲ್ಲಿ ಮಂಡಿಸಲಾಗಿತ್ತು. ಅದಕ್ಕೆ ಅನುಮೋದನೆಯೂ ದೊರೆತಿತ್ತು. ಆದರೆ, ರಾಜ್ಯಸಭೆಯಲ್ಲಿ ಅನುಮೋದನೆ ಬಾಕಿ ಇತ್ತು. 16ನೇ ಲೋಕಸಭೆಯ ವಿಸರ್ಜನೆಯಿಂದಾಗಿ ಮತ್ತೊಮ್ಮೆ ವಿಧೇಯಕವನ್ನು ಎರಡೂ ಸದನಗಳಲ್ಲಿ ಮಂಡಿಸಿ, ಅನುಮೋದನೆ ಪಡೆಯುವುದು ಅನಿವಾರ್ಯವಾಗಿದೆ.

ಅನಿವಾಸಿ ಭಾರತೀಯರಿಗೆ (ಎನ್ನಾರೈ) ಪ್ರಾಕ್ಸಿ ವೋಟಿಂಗ್ ಹಕ್ಕು ನೀಡಲು 'ಜನಪ್ರತಿನಿಧಿ ಕಾಯಿದೆ -1950ಕ್ಕೆ' ತಿದ್ದುಪಡಿ ತರುವುದು ಅಗತ್ಯವಾಗಿದೆ. ಅಲ್ಲದೆ, ಜನಪ್ರತಿನಿಧಿ ಕಾಯಿದೆ (ತಿದ್ದುಪಡಿ)-2010ರ ಸೆಕ್ಷನ್ 20(ಎ) ಅಡಿಯಲ್ಲಿ ವಿದೇಶದಲ್ಲಿರುವ ಭಾರತೀಯರು ಮತ ಚಲಾಯಿಸಲು ಭಾರತಕ್ಕೆ ಖುದ್ದು ಬರಲೇಬೇಕೆಂಬ ಷರತ್ತಿದ್ದು, ಇದನ್ನೂ ರದ್ದುಗೊಳಿಸಬೇಕಿದೆ.

| 3.10 | 114 | 10,000 |
|---|---|---|
| ಕೋಟಿ: ವಿವಿಧ ದೇಶಗಳಲ್ಲಿ ನೆಲೆಸಿರುವ ಎನ್ನಾರೈಗಳ ಸಂಖ್ಯೆ | ಪ್ರಸ್ತುತ ಇಂತಹ ವ್ಯವಸ್ಥೆ ಜಾರಿಯಲ್ಲಿರುವ ದೇಶಗಳು | ಪ್ರಸ್ತುತ ದೇಶಕ್ಕೆ ಬಂದು ಮತ ಚಲಾವಣೆ ಮಾಡುತ್ತಿರುವ ಅಂದಾಜು ಎನ್ನಾರೈಗಳ ಸಂಖ್ಯೆ |




## ಏನಿದು ಪ್ರಾಕ್ಸಿ ವೋಟಿಂಗ್ ವಿಧೇಯಕ?

ವಿದೇಶದಲ್ಲಿ ನೆಲೆಸಿರುವ, ಮತದಾನ ಹಕ್ಕು ಹೊಂದಿರುವ ಭಾರತೀಯರು ಅವರ ಮೂಲ ಕ್ಷೇತ್ರದಲ್ಲಿ ನಡೆಯುವ ವಿವಿಧ ಚುನಾವಣೆಗಳಲ್ಲಿ ತಮ್ಮ ಪ್ರತಿನಿಧಿಯ ಮೂಲಕ ಮತ ಚಲಾವಣೆ ಮಾಡಲು ಇದು ಅವಕಾಶ ಕಲ್ಪಿಸುತ್ತದೆ. ಪ್ರಸ್ತುತ ನಿಯಮಗಳ ಪ್ರಕಾರ 'ಯಾವುದೇ ಮತದಾರ, ಚುನಾವಣೆ ದಿನದಂದು ತನ್ನ ತವರು ಕ್ಷೇತ್ರಕ್ಕೆ ಖುದ್ದಾಗಿ ಆಗಮಿಸಿ ಮತದಾನ ಮಾಡಬೇಕು. ಪಾಸ್‌ಪೋರ್ಟ್ ಸಮೇತ ಮತಗಟ್ಟೆಗೆ ಆಗಮಿಸಿ, ಹಕ್ಕು ಚಲಾವಣೆ ಮಾಡಬೇಕು. ಆದರೆ, ಹೊಸ ವಿಧೇಯಕ ಅಂಗೀಕಾರವಾದರೆ, ವಿದೇಶದಲ್ಲಿರುವ ಮತದಾರರ ಪರವಾಗಿ ಅವರು ನೇಮಿಸಿದ ನಿರ್ದಿಷ್ಟ ಪ್ರತಿನಿಧಿ ಮತದಾನ ಮಾಡಲು ಅವಕಾಶವಾಗಲಿದೆ. ಇದರಿಂದ ಎನ್ನಾರೈಗಳು ಅನಗತ್ಯವಾಗಿ ಭಾರತಕ್ಕೆ ಪ್ರಯಾಣ ಬೆಳೆಸುವುದು ತಪ್ಪಲಿದೆ. ಚುನಾವಣಾ ಆಯೋಗದ ಮಾಹಿತಿ ಪ್ರಕಾರ ಬಹುತೇಕ ಎನ್ನಾರೈಗಳು ಕೆಲಸದ ಒತ್ತಡ ಹಾಗೂ ಪ್ರಯಾಣ ಖರ್ಚನ್ನು ಪರಿಗಣಿಸಿ, ಮತದಾನದಿಂದ ದೂರ ಉಳಿಯುತ್ತಿದ್ದಾರೆ.

## ಪ್ರಯೋಜನವೇನು?

- ವಿದೇಶದಲ್ಲಿರುವ ಭಾರತೀಯರು ಲೋಕಸಭೆ, ವಿಧಾನಸಭೆ ಮತ್ತು ಸ್ಥಳೀಯ ಚುನಾವಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶ ದೊರೆಯಲಿದೆ.
- ವಿದೇಶದಲ್ಲಿ ಕೋಟ್ಯಂತರ ಎನ್ನಾರೈಗಳು ನೆಲೆಸಿರುವುದರಿಂದ ಅವರ ಮತಗಳು ಸರಕಾರದ ಆಯ್ಕೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ.
- ಕೆಲಸದ ಒತ್ತಡದ ನಡುವೆ ರಜೆ ಪಡೆದು ಭಾರತಕ್ಕೆ ಬರುವ ಮತ್ತು ಪ್ರಯಾಣಕ್ಕೆ ಲಕ್ಷಾಂತರ ರೂ ಖರ್ಚು ಮಾಡುವ ಅಗತ್ಯ ತಪ್ಪುವ ಹಿನ್ನೆಲೆಯಲ್ಲಿ ಮತದಾನ ಪ್ರಮಾಣ ಹೆಚ್ಚಾಗಲಿದೆ.

## ಆಕ್ಷೇಪಣೆಗಳೇನು?

- ವಿದೇಶದಲ್ಲಿರುವ ಎನ್ನಾರೈಗಳಿಗೆ ದೊರೆಯುವ ಪ್ರಾಕ್ಸಿ ಮತದಾನದ ವಿಶೇಷ ಹಕ್ಕು, ದೇಶದಲ್ಲೇ ಕೆಲಸದ ನಿಮಿತ್ತ ಬೇರೆ ರಾಜ್ಯದಲ್ಲಿ ನೆಲೆಸಿರುವವರಿಗೆ ಇಲ್ಲದಿರುವುದು.
- ಎನ್ನಾರೈಗಳು ನೇಮಿಸುವ ಪ್ರತಿನಿಧಿಗಳು ಅವರು ಸೂಚಿಸಿದ ವ್ಯಕ್ತಿಗೇ ಮತ ಚಲಾಯಿಸುತ್ತಾರೆಯೇ ಎಂಬುದು ಅನುಮಾನ.
- ವಿದೇಶದಲ್ಲಿ ನೆಲೆಸಿರುವವರಿಗೆ ಸ್ಥಳೀಯ ಸಮಸ್ಯೆಗಳು ಮತ್ತು ನಾಯಕರ ಬಗ್ಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ.
- ಎನ್ನಾರೈಗಳು ಯಾವುದೇ ಆಮಿಷಕ್ಕೆ ಒಳಗಾಗದೆ ಮತ ಚಲಾಯಿಸಿದ್ದಾರೆ ಎಂಬುದಕ್ಕೆ ಯಾವುದೇ ಖಚಿತ ದೃಢೀಕರಣ ಇಲ್ಲದಿರುವುದು.
- ಎನ್ನಾರೈ ಮತಗಳ ನಿರ್ದಿಷ್ಟ ಸಂಖ್ಯೆಯ ಬಗ್ಗೆ ಮಾಹಿತಿ ಪಡೆಯುವುದು ತ್ರಾಸದಾಯಕ.